**All India Radio: Bangalore**
**National Bulletin In Kannada**
**30.06.2026 1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**30.06.2026 1.10 pm**

**<>><><*><><<>**

ಮುಖ್ಯಾಂಶಗಳು

**೧. ಗ್ರೀಸ್‌ನಲ್ಲಿ ಭಾರತದ ಯುಪಿಐ ಸೇವೆಗಳು ಈಗ ಅಧಿಕೃತವಾಗಿ ಲಭ್ಯ - ಕೇಂದ್ರ ಸಚಿವ ಪಿಯೂಶ್ ಗೋಯಲ್**

**೨. ಕೃಷಿ ವಲಯ ಅಭಿವೃದ್ಧಿಪಡಿಸದೇ ವಿಕಸಿತ ಭಾರತದ ನಿರ್ಮಾಣ ಅಸಾಧ್ಯ - ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್**

**೩. ಪಶ್ಚಿಮ ಏಷ್ಯಾ ಉದ್ವಿಗ್ನತೆ; ಅಮೆರಿಕಾ-ಇರಾನ್ ದೋಹಾ ಮಾತುಕತೆ ಬಗ್ಗೆ ಗೊಂದಲ**

**೪. ಕರ್ನಾಟಕಾದ್ಯಂತ ಎಸ್‌ಐಆರ್ ಪ್ರಕ್ರಿಯೆಗೆ ಅಧಿಕೃತ ಚಾಲನೆ; ೫೯ ಸಾವಿರಕ್ಕೂ ಅಧಿಕ ಅಧಿಕಾರಿಗಳಿಂದ ಬೃಹತ್ ಅಭಿಯಾನ**

**೫. ೨೦೨೬ರ ಏಷ್ಯನ್ ಗೇಮ್ಸ್ ಕ್ರೀಡಾಕೂಟಕ್ಕಾಗಿ ೧೫ ಸದಸ್ಯರ ಭಾರತೀಯ ಮಹಿಳಾ ಕ್ರಿಕೆಟ್ ತಂಡ ಪ್ರಕಟಿಸಿದ ಬಿಸಿಸಿಐ**

**<>><><*><><<>**

ಗ್ರೀಸ್ ದೇಶದಲ್ಲಿ ಭಾರತದ ಯುಪಿಐ ಸೇವೆಗಳು ಈಗ ಅಧಿಕೃತವಾಗಿ ಲಭ್ಯವಾಗಿದ್ದು, ಇದರೊಂದಿಗೆ ಭಾರತದ ಡಿಜಿಟಲ್ ಪಾವತಿ ವ್ಯವಸ್ಥೆಯು ಜಾಗತಿಕವಾಗಿ ಮತ್ತಷ್ಟು ವಿಸ್ತರಿಸಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ಈ ನೂತನ ಸೇವೆಯಿಂದಾಗಿ ಗ್ರಾಹಕರು ಅತ್ಯಂತ ಸುರಕ್ಷಿತವಾಗಿ, ಸುಲಭವಾಗಿ ಮತ್ತು ಅತ್ಯಂತ ಕಡಿಮೆ ವೆಚ್ಚದಲ್ಲಿ ಹಣವನ್ನು ವರ್ಗಾವಣೆ ಮಾಡಬಹುದಾಗಿದೆ. ಯುಪಿಐ ವ್ಯವಸ್ಥೆಗೆ ಜಾಗತಿಕ ಮಟ್ಟದಲ್ಲಿ ಸಿಗುತ್ತಿರುವ ಈ ಮನ್ನಣೆಯು, ಗಡಿಗಳನ್ನು ಮೀರಿ ಜಾಗತಿಕ ಅಭಿವೃದ್ಧಿಗೆ ಪೂರಕವಾಗುವ ತಂತ್ರಜ್ಞಾನ ಆಧಾರಿತ ಪರಿಹಾರಗಳನ್ನು ರೂಪಿಸುವ ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಸಚಿವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ತಮ್ಮ ಗ್ರೀಸ್ ಪ್ರವಾಸದ ವೇಳೆ ಸಚಿವರು ಅಲ್ಲಿನ ಪ್ರಮುಖ ಬ್ಯಾಂಕ್ ಆದ 'ಯೂಲೋಬ್ಯಾಂಕ್' ಸಿಇಒ ಫೋಕಿಯನ್ ಕರಾವಿಯಾಸ್ ಅವರನ್ನು ಭೇಟಿಯಾಗಿ, ಭಾರತದಲ್ಲಿ ಹೂಡಿಕೆ ಮಾಡುವಂತೆ ಗ್ರೀಸ್‌ನ ಉದ್ಯಮಿಗಳಿಗೆ ಕರೆ ನೀಡಿದರು. ಇದಕ್ಕೂ ಮುನ್ನ 'ಭಾರತ-ಗ್ರೀಸ್ ಉದ್ಯಮ ವೇದಿಕೆ'ಯನ್ನು ಉದ್ದೇಶಿಸಿ ಮಾತನಾಡಿದ ಪಿಯೂಷ್ ಗೋಯಲ್, ಭಾರತದ ಸ್ಥಿರವಾದ ಆರ್ಥಿಕ ಪ್ರಗತಿಯು ಗ್ರೀಸ್ ದೇಶಕ್ಕೆ ಹೂಡಿಕೆಯ ಅಪಾರ ಅವಕಾಶಗಳನ್ನು ಒದಗಿಸಲಿದೆ ಎಂದರು.

**<>><><*><><<>**

ಕೃಷಿ ವಲಯವನ್ನು ಅಭಿವೃದ್ಧಿ ಪಡಿಸದೇ ವಿಕಸಿತ ಭಾತದ ಕನಸನ್ನು ಸಾಕಾರಗೊಳಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ. ಹರಿಯಾಣದ ಹಿಸಾರ್‌ನಲ್ಲಿ ನಡೆದ ಖೇತ್ ಬಚಾವೋ ಅಭಿಯಾನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಮಣ್ಣಿನ ಆರೋಗ್ಯ ಮತ್ತು ಅಗತ್ಯವಿರುವ ರಸಗೊಬ್ಬರದ ಪ್ರಮಾಣದ ಬಗ್ಗೆ ನಿಖರ ಮಾಹಿತಿ ನೀಡುವ ವಿಶೇಷ ಮೊಬೈಲ್ ಆಪ್‌ನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕೆಲಸ

ಮಾಡುತ್ತಿದೆ. ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳಲು ರೈತರು ತಮ್ಮ ಜಮೀನುಗಳಲ್ಲಿ ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಸಮತೋಲಿತ ಪ್ರಮಾಣದಲ್ಲಿ ಬಳಸಬೇಕು ಹಾಗೂ ಸಾವಯವ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

**<><><*><><>**

ಪಶ್ಚಿಮ ಏಷ್ಯಾದ ಉದ್ವಿಗ್ನತೆಯನ್ನು ಕಡೆಮೆ ಮಾಡುವ ರಾಜತಾಂತ್ರಿಕ ಪ್ರಯತ್ನಗಳಿಗೆ ಆರಂಭದಲ್ಲೇ ಹಿನ್ನಡೆಯಾಗಿದೆ. ಅಮೆರಿಕ -ಇರಾನ್ ಸಂಘರ್ಷದ ಕುರಿತಂತೆ ದೋಹಾದಲ್ಲಿ ನಡೆಯಬೇಕಿದ್ದ ಮಾತುಕತೆಗಳ ಮೇಲೆ ಅನಿಶ್ಚಿತತೆ ಹೆಚ್ಚಾಗಿದೆ. ಅಮೆರಕದೊಂದಿಗೆ ಯಾವುದೇ ಮಾತುಕತೆಗಳನ್ನು ಪ್ರಸ್ತುತ ಯೋಜಿಸಲಾಗಿಲ್ಲ ಎಂದು ಇರಾನ್ ತಿಳಿಸಿದೆ. ಇತ್ತೀಚಿನ ಮಧ್ಯಂತರ ಒಪ್ಪಂದವನ್ನು ಮುನ್ನಡೆಸಲು ಇರಾನ್ ನಿಯೋಗ ಮುಖಾಮುಖಿ ಮಾತುಕತೆಗೆ ವಿನಂತಿಸಿದೆ ಎಂದು ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಹೇಳಿದ್ದಾರೆ. ಆದರೆ, ಇರಾನ್ ಈ ಹೇಳಿಕೆಯನ್ನು ನಿರಾಕರಿಸಿದ್ದು, ತಮ್ಮ ನಿಯೋಗ ಕೇವಲ ತಾಂತ್ರಿಕ ಚರ್ಚೆಗಾಗಿ ದೋಹಾಗೆ ಭೇಟಿ ನೀಡುತ್ತಿದೆಯೇ ಹೊರತು ಅಮೆರಿಕಾದೊಂದಿಗೆ ಯಾವುದೇ ನೇರ ಮಾತುಕತೆ ನಿಗದಿಯಾಗಿಲ್ಲ ಎಂದು ಸ್ಪಷ್ಟಪಡಿಸಿದೆ.  ಅಮೆರಿಕ ನಿರ್ಬಂಧಗಳನ್ನು ಸಡಿಲಗೊಳಿಸಿದರೆ ಮಾತ್ರ ತಾವು ಒಪ್ಪಂದಕ್ಕೆ ಬದ್ಧರಾಗಿರುವುದಾಗಿ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್‌ಕಿಯಾನ್ ತಿಳಿಸಿದ್ದಾರೆ.  ಮತ್ತೊಂದೆಡೆ ಪ್ರಾದೇಶಿಕ ಆತಂಕಗಳು ಮುಂದುವರೆದಿವೆ. ಲೆಬನಾನ್‌ನಲ್ಲಿ ಇಸ್ರೇಲ್ ಜೊತೆ ದೀರ್ಘಕಾಲಿನ ಕದನ ವಿರಾಮ ಏರ್ಪಡಿಸುವ ನಿಟ್ಟಿನಲ್ಲಿ ಅಮೆರಿಕ ಬೆಂಬಲಿತ ಪ್ರಸ್ತಾಪದ ಕುರಿತು ಚರ್ಚೆಗಳು ತೀವ್ರಗೊಂಡಿವೆ. ಈ ಪ್ರಸ್ತಾಪ ಲೆಬನಾನ್ ಹಿತಾಸಕ್ತಿಗೆ ಅನುಗುಣವಾಗಿಲ್ಲ ಎಂದು ಅಲ್ಲಿನ ಸಂಸತ್ತಿನ ಸ್ಪೀಕರ್ ನಬೀಹ್ ಬೆರ್ರಿ ಟೀಕಿಸಿದ್ದಾರೆ.

**<><><*><><>**

ಪ್ರತಿ ವರ್ಷ ಜೂನ್ ೩೦ರಂದು ಜಾರ್ಖಂಡ್‌ನಲ್ಲಿ ಸಂತಾಲ್ ಕ್ರಾಂತಿ ದಿನ 'ಹುಲ್ ದಿವಸ್' ಆಚರಿಸಲಾಗುತ್ತದೆ. ಬುಡಕಟ್ಟು ಕ್ರಾಂತಿಕಾರಿಗಳಾದ ಸಿದೋ-ಕಾನ್ಹು, ಚಾಂದ್-ಭೈರವ್ ಹಾಗೂ ಫುಲೋ-ಝಾನೋ ಅವರ ತ್ಯಾಗ ಮತ್ತು ಬಲಿದಾನವನ್ನು ಸ್ಮರಿಸುವ ಉದ್ದೇಶದಿಂದ ಈ ದಿನವನ್ನು ಆಚರಿಸಲಾಗುತ್ತದೆ. ಜಾರ್ಖಂಡ್‌ನ ಸಾಹಿಬ್‌ಗಂಜ್ ಜಿಲ್ಲೆಯ ಭೋಗ್ನಾಡಿಹ್ ಗ್ರಾಮದಲ್ಲಿ ಇಂದು ಸಾವಿರಾರು ಜನರು ಸೇರಿ ಸಂತಾಲ್ ಹುಲ್‌ನ ಅಮರ ಹುತಾತ್ಮರಿಗೆ ಗೌರವ ನಮನ ಸಲ್ಲಿಸಲಿದ್ದಾರೆ. ಜಾರ್ಖಂಡ್‌ನಲ್ಲಿ ಹುಲ್ ದಿವಸ್ ಅನ್ನು ಸ್ವಾಭಿಮಾನ, ಪ್ರತಿರೋಧ ಮತ್ತು ಬುಡಕಟ್ಟು ಅಸ್ಮಿತೆಯ ಸಂಕೇತವಾಗಿ ಪರಿಗಣಿಸಲಾಗುತ್ತದೆ. ಈ ಹಿನ್ನಲೆಯಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ, ವಿಶೇಷವಾಗಿ ಭೋಗ್ನಾಡಿಹ್‌ನಲ್ಲಿ, ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇದೇ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂತಾಲ್ ಕ್ರಾಂತಿಯ ಅಮರ ವೀರರು ಮತ್ತು ವೀರ ಮಹಿಳೆಯರ ತ್ಯಾಗ ಹಾಗೂ ಬಲಿದಾನಕ್ಕೆ ಗೌರವ ನಮನ ಸಲ್ಲಿಸಿದ್ದಾರೆ. ಬುಡಕಟ್ಟು ಸಮಾಜದ ಮೇಲಿನ ಶೋಷಣೆಯ ವಿರುದ್ಧ ಹಾಗೂ ತಮ್ಮ ಅಸ್ತಿತ್ವವನ್ನು ಕಾಪಾಡಲು ಅವರು ಐತಿಹಾಸಿಕ ಹೋರಾಟ ನಡೆಸಿದ್ದರು ಎಂದು ರಾಷ್ಟ್ರಪತಿ ಸ್ಮರಿಸಿದ್ದಾರೆ. ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಸಂತಾಲ್ ಹುಲ್ ಹೋರಾಟದ ವೀರರಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

**<><><*><><>**

ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ- ಎಸ್‌ಐಆರ್ ಪ್ರಕ್ರಿಯೆಯು ಕರ್ನಾಟಕದಾದ್ಯಂತ ಅಧಿಕೃತವಾಗಿ ಚಾಲನೆಗೊಂಡಿದ್ದು, ರಾಜ್ಯದ ಮತದಾರರ ಪಟ್ಟಿಯನ್ನು ನವೀಕರಿಸಲು ಸುಮಾರು ೫೯ ಸಾವಿರಕ್ಕೂ ಹೆಚ್ಚು ಬೂತ್ ಮಟ್ಟದ ಅಧಿಕಾರಿಗಳು ಒಂದು ತಿಂಗಳ ಕಾಲ ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸುವ ಬೃಹತ್ ಅಭಿಯಾನವನ್ನು ಆರಂಭಿಸಿದ್ದಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ನಿವಾಸದಲ್ಲಿ ಅಧಿಕಾರಿಗಳಿಂದ ಗಣತಿ ನಮೂನೆ ಪಡೆದು, ಭರ್ತಿ ಮಾಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿ ಯಶವಂತ್ ಗುರ್‌ಕರ್ ಉಪಸ್ಥಿತರಿದ್ದರು.

೨೦೨೬ರ ಅಕ್ಟೋಬರ್ ೧ ಅನ್ನು ಅರ್ಹತಾ ದಿನಾಂಕವನ್ನಾಗಿ ಇಟ್ಟುಕೊಂಡು ಭಾರತೀಯ ಚುನಾವಣಾ ಆಯೋಗವು ದೇಶದ ೧೬ ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಪರಿಷ್ಕರಣೆ ನಡೆಸುತ್ತಿದ್ದು, ಕರ್ನಾಟಕದ ಪ್ರಸ್ತುತ ೫.೫೪ ಕೋಟಿ ನೋಂದಾಯಿತ ಮತದಾರರನ್ನು ಇದು ಒಳಗೊಳ್ಳಲಿದೆ. ಜೂನ್ ೩೦ ರಿಂದ ಜುಲೈ ೨೯ ರವರೆಗೆ ನಡೆಯಲಿರುವ ಈ ಮನೆ ಮನೆ ಗಣತಿ ಕಾರ್ಯದಲ್ಲಿ, ಬಿಎಲ್‌ಒಗಳು ಪ್ರತಿ ಮನೆಗೆ ಭೇಟಿ ನೀಡಿ ಅರ್ಜಿಗಳನ್ನು ವಿತರಿಸಲಿದ್ದಾರೆ. ಆಗಸ್ಟ್ ೫ ರಂದು ಕರಡು ಮತದಾರರ ಪಟ್ಟಿ ಪ್ರಕಟವಾಗಲಿದ್ದು, ಸೆಪ್ಟೆಂಬರ್ ೪ ರವರೆಗೆ ಆಕ್ಷೇಪಣೆ ಸಲ್ಲಿಕೆಗೆ ಅವಕಾಶವಿರಲಿದೆ ಹಾಗೂ ಅಕ್ಟೋಬರ್ ೭ ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು.

**<>><><*><><<>**

ಅಂತಾರಾಷ್ಟ್ರೀಯ ಸಂಸದೀಯ ದಿನದ ಅಂಗವಾಗಿ ಲೋಕಸಭೆ ಸಭಾಧ್ಯಕ್ಷ ಓಂ ಬಿರ್ಲಾ ಅವರು ವಿಶ್ವದಾದ್ಯಂತದ ಚುನಾಯಿತ ಪ್ರತಿನಿಧಿಗಳಿಗೆ ಹಾಗೂ ಪ್ರಜಾಸತ್ತಾತ್ಮಕ ಸಂಸ್ಥೆಗಳಿಗೆ ಶುಭ ಹಾರೈಸಿದ್ದಾರೆ.  ಸಂಸತ್ತು, ಸಾರ್ವಜನಿಕರ ಆಕಾಂಕ್ಷೆಗಳು ಮತ್ತು ಸಾಂವಿಧಾನಿಕ ಮೌಲ್ಯಗಳ ಅತ್ಯುನ್ನತ ವೇದಿಕೆಯಾಗಿದ್ದು, ಬಲಿಷ್ಠ ಹಾಗೂ ಜವಾಬ್ದಾರಿಯುತ ಸಂಸತ್ತು ಮಾತ್ರ ಪ್ರಜಾಪ್ರಭುತ್ವದ ನಿಜವಾದ ಶಕ್ತಿಯಾಗಿದೆ ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

**<>><><*><><<>**

ಸಿಖ್ ಧರ್ಮದ ಆರನೇ ಗುರುಗಳಾದ ಗುರು ಹರಗೋಬಿಂದ್ ಸಾಹಿಬ್ ಜೀ ಅವರ ಪ್ರಕಾಶ್ ಪರ್ಬ್ ಅಂಗವಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶುಭಾಶಯ ಕೋರಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡಿರುವ ಅಮಿತ್ ಶಾ, ಧರ್ಮ, ಸಂಸ್ಕೃತಿ ಹಾಗೂ ಮಾನವೀಯ ಮೌಲ್ಯಗಳ ರಕ್ಷಣೆಗಾಗಿ ಸಂತ-ಸಿಪಾಯಿ ಪರಂಪರೆಗೆ ಗುರು ಹರಗೋಬಿಂದ್ ಸಾಹಿಬ್ ಅವರು ಅಡಿಪಾಯ ಹಾಕಿದರು ಎಂದು ಹೇಳಿದ್ದಾರೆ.

**<>><><*><><<>**

ಜಪಾನ್‌ನ ಐಚಿ-ನಗೋಯಾದಲ್ಲಿ ನಡೆಯಲಿರುವ ೨೦೨೬ರ ಏಷ್ಯನ್ ಗೇಮ್ಸ್  ಕ್ರೀಡಾಕೂಟಕ್ಕಾಗಿ ಬಿಸಿಸಿಐ ಇಂದು ೧೫ ಸದಸ್ಯರ ಭಾರತೀಯ ಮಹಿಳಾ ಕ್ರಿಕೆಟ್ ತಂಡವನ್ನು ಪ್ರಕಟಿಸಿದೆ. ತಂಡವನ್ನು ಹರ್ಮನ್ ಪ್ರೀತ್ ಕೌರ್ ಮುನ್ನಡೆಸಲಿದ್ದಾರೆ. ಜಪಾನ್‌ನಲ್ಲಿ ಈ ಕ್ರೀಡಾಕೂಟ ಸೆಪ್ಟೆಂಬರ್ ೧೯ ರಂದು ಆರಂಭವಾಗಲಿದ್ದು, ಅಕ್ಟೋಬರ್ ೪ರವರೆಗೆ ನಡೆಯಲಿದೆ. ಇತ್ತೀಚೆಗೆ ಮುಕ್ತಾಯಗೊಂಡ ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್‌ನಲ್ಲಿ ಆಡಿದ್ದು, ಬಹುತೇಕ ಆಟಗಾರ್ತಿಯರನ್ನೇ ಆಯ್ಕೆ ಸಮಿತಿ ಉಳಿಸಿಕೊಂಡಿದ್ದು, ಗಾಯಾಳು ಯಾಸ್ತಿಕಾ ಭಾಟಿಯಾ ಬದಲಿಗೆ ಬ್ಯಾಟರ್ ಮತ್ತು ವಿಕೆಟ್ ಕೀಪರ್ ಜಿ ಕಮಲಿನಿ ಅವರಿಗೆ ತಂಡದಲ್ಲಿ ಸ್ಥಾನ ಕಲ್ಪಿಸಲಾಗಿದೆ. ಕಳೆದ ಬಾರಿ ಚೀನಾದಲ್ಲಿ ನಡೆದಿದ್ದ ಏಷ್ಯನ್ ಗೇಮ್ಸ್‌ನಲ್ಲಿ ಐತಿಹಾಸಿಕ ಚಿನ್ನದ ಪದಕ ಗೆದ್ದಿದ್ದ ಭಾರತ ತಂಡ, ಈ ಬಾರಿ ಹಾಲಿ ಚಾಂಪಿಯನ್ ಆಗಿ ಕಣಕ್ಕಿಳಿಯಲಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ  ><><<>**